ಯೋಜನೆ ಮತ್ತು ಯೋಜನೇತರ ವೆಚ್ಚಗಳು

47(102); ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ, (ಭಾಲ್ಕಿ)

ಅ) ಕಳೆದ 3 ವರ್ಷಗಳಲ್ಲಿ ರಾಜ್ಯದ ಆಯವ್ಯಯದಲ್ಲಿ ಯೋಜನೇತರ ವೆಚ್ಚಗಳಿಗಾಗಿ ಎಷ್ಟು ಅನುದಾನ ಒದಗಿಸಲಾಗಿದೆ; ಎಷ್ಟು ವೆಚ್ಚ ಮಾಡಲಾಗಿದೆ; ಎಷ್ಟು ಬಾಕಿ ಇದೆ (ಸಂಪೂರ್ಣ ವಿವರ ನೀಡುವುದು);

ಆ) ಈ 3 ವರ್ಷಗಳ ಯೋಜನೇತರ ವೆಚ್ಚದಲ್ಲಿ ಸರ್ಕಾರಿ ನೌಕರರಿಗೆ ನೀಡುವ ವೇತನಕ್ಕೆ ಎಷ್ಟು ಹಣ ನೀಡಲಾಗಿದೆ; ಇತರೆ ವೆಚ್ಚಕ್ಕೆ ಎಷ್ಟು ಹಣ ನೀಡಲಾಗಿದೆ (ವಿವರ ನೀಡುವುದು);

ಇ) ಆಯವ್ಯಯದಲ್ಲಿನ ಯೋಜನೇತರ ಹಾಗೂ ಯೋಜನೆಯ ವೆಚ್ಚದ ಅನುಪಾತ ಎಷ್ಟಿದೆ;

ಈ) ಅನಗತ್ಯ ಯೋಜನೇತರ ವೆಚ್ಚಕ್ಕೆ ಕಡಿವಾಣ ಹಾಕಲು ಸರ್ಕಾರ ಏನಾದರೂ ಅಗತ್ಯ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ)

(₹ಕೋಟಿಗಳಲ್ಲಿ)

ವರ್ಷ	ಒಟ್ಟು ಅನುದಾನ	ಯೋಜನೆ ಅನುದಾನ	ಯೋಜನೇತರ ಅನುದಾನ
2012–13 (ಆಯವ್ಯಯ ಅಂದಾಜು)	102742	40240	62502
2013–14 (ಆಯವ್ಯಯ ಅಂದಾಜು)	121611	50847	70764
2014–15 (ಆಯವ್ಯಯ ಅಂದಾಜು)	138008	57618	80390

ಆ)

(ಕೋಟಿಗಳಲ್ಲಿ)

	ಒಟ್ಟು ವೆಚ್ಚ	ವೇತನಕ್ಕೆ ಭರಿಸಲಾದ ವೆಚ್ಚ	ವೇತನೇತ್ತರ ವೆಚ್ಚ

2012–13 ಲಕ್ಷ	96601	16084	80517
2013–14 ಪೂರ್ವಾಸ್ತವಿಕ	110649	17810	92839
2014–15 (ಆಯವ್ಯಯ ಅಂದಾಜು)	138008	23315	114693

ಇ) 2014–15ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ಅನುದಾನದಲ್ಲಿ ಶೇ.41.75 ಯೋಜನೆಗಳಿಗೆ ಮತ್ತು ಶೇ.58.25 ಯೋಜನೇತರ ವೆಚ್ಚಗಳಿಗಾಗಿ ಒದಗಿಸಲಾಗಿದೆ.

ಈ) ಅನಗತ್ಯ ಯೋಜನೇತರ ವೆಚ್ಚಕ್ಕೆ ಕಡಿವಾಣ ಹಾಕಲು ಸರ್ಕಾರವು ಆರ್ಥಿಕ ಮಿತವ್ಯಯ ಆದೇಶವನ್ನು ದಿನಾಂಕ: 21–10–2009 ರಿಂದ ಜಾರಿಗೆ ತಂದಿದೆ.

ನಿಮ್ಸ್ (NIMS) ಸ್ಥಾಪನೆ

48(103); ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಬೀದರ್ ಜಿಲ್ಲೆಯಲ್ಲಿ ನಿಮ್ಸ್ (ಓಖಒಖ) ರಾಷ್ಟ್ರೀಯ ಮೂಲಭೂತ ಸೌಕರ್ಯಗಳ ಉತ್ಪಾದನಾ ವಲಯ ಸ್ಥಾಪಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ತಾಂತ್ರಿಕ ಒಪ್ಪಿಗೆ ಪಡೆಯಲಾಗಿದೆಯೇ;

ಆ) ಈ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರ ಯಾವ ಯಾವ ಕ್ರಮಗಳನ್ನು ತೆಗೆದುಕೊಂಡಿದೆ ಹಾಗೂ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಗುರುತಿಸಲಾಗಿದೆ (ಸಂಪೂರ್ಣ ವಿವರ ನೀಡುವುದು)

ಇ) ಈ ಯೋಜನೆಯಿಂದ ಜಿಲ್ಲೆಗೆ ಹಾಗೂ ರಾಜ್ಯಕ್ಕೆ ಆಗುವ ಲಾಭವೇನು; ಈ ಯೋಜನೆಯಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಪಾತ್ರವೇನು (ಸಂಪೂರ್ಣ ವಿವರ ನೀಡುವುದು)?